MANUVIKASA
Success Stories

# ಶೋಭಾ ಗಣಪತಿ ಆರೇರಾ ಅವರ ರೊಟ್ಟಿ ತಯಾರಿಕೆ ಉದ್ದಿಮೆ

*__ಸಾರಾಂಶ:__ ಕೂಲಿಯ ಅವಲಂಬನೆ, ಗುಡಿಸಲ ವಾಸ, ನಾಲ್ಕು ಮಕ್ಕಳ ತುಂಬು ಸಂಸಾರ, ವಾರಿಗೆಯವರ ಕುಹಕ, ಗಂಡನ ಅನಾರೋಗ್ಯ – ಇಂತಹ ಪರಿಸ್ಥಿತಿಯನ್ನು ಮೆಟ್ಟಿ ನಿಲ್ಲಲು ಸ್ವ-ಉದ್ಯೋಗದ ಮೊರೆ ಹೋಗಿ ಯಶಸ್ವಿಯಾಗಿರುವ ಹೆಣ್ಣುಮಗಳೊಬ್ಬಳ ಯಶಸ್ಸಿನ ಕಥನ ಇದು.*

2 ಎಕರೆ ಜಮೀನಿದೆ, ಆದರೆ ಹೊಳೆ ನೀರು ಪ್ರವಾಹ ಬಂದು ಅಲ್ಲಿ ಬೇಸಾಯ ಮಾಡುವುದು ಕಷ್ಟ. ಭೂಮಿ ಸವುಳಾಗಿದೆ. ಹೊಳೆ ಮೇಲ್ಭಾಗದಲ್ಲಿ ವಿಪರೀತ ರಿಯಲ್ ಎಸ್ಟೇಟ್ ಉದ್ಯಮದಿಂದಾಗಿ ಮಣ್ಣಿನ ಸವಕಳಿ ಉಂಟಾಗಿ ಕಳೇದ 5–6 ವರ್ಷಗಳಿಂದ ಪ್ರತಿ ವರ್ಷ ಪ್ರವಾಹ ಉಂಟಾಗುತ್ತಿದೆ. ಮೊದಲು ಈ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದರು. ಇವರ ಗಂಡ ಗಣಪತಿಯವರು ಲಾರಿ ಕೆಲಸಕ್ಕೆ ಹೋಗುತ್ತಿದ್ದರು. ಆದರೆ ಕಳೇದ ಮೂರು ವರ್ಷಗಳಿಂದ ಕಣ್ಣಿನ ಸಮಸ್ಯೆಯಿಂದಾಗಿ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದ್ದಾರೆ.



ಈ ದಂಪತಿಗಳಿಗೆ ನಾಲ್ಕು ಜನ ಮಕ್ಕಳು. ಒಂದು ಗಂಡು, ಮೂರು ಹೆಣ್ಣು ಮಕ್ಕಳು. ಒಬ್ಬ ಮಗಳಿಗೆ ಮದುವೆಯಾಗಿದ್ದು ಉಳಿದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಾ ಮನೆಯಲ್ಲಿ ಅಮ್ಮನ ರೊಟ್ಟಿ ಉದ್ಯಮಕ್ಕೆ ಸಹಕರಿಸುತ್ತಿದ್ದಾರೆ. ರೊಟ್ಟಿ ಉದ್ಯಮದ ಜೊತೆಗೆ ಮೂರು ಹಸುಗಳಿವೆ. ಎರಡು ನಾಟಿ ಹಸು ಮತ್ತು ಒಂದು ಸಿಂಧಿ ತಳಿ. ಹೈನುಗಾರಿಕೆಯನ್ನೂ ಒಂದು ಉಪ ಆದಾಯದ ಮೂಲವಾಗಿಸಿಕೊಂಡಿದ್ದಾರೆ.

ಶೋಭಾ 4ನೇ ತರಗತಿ ಓದಿದ್ದಾರೆ. ಇವರ ತವರುಮನೆ ಹಾನಗಲ್. 1999ರಲ್ಲಿ ಮದುವೆ ಆಯಿತು. ಆಗ ಜೀವನ ನಿರ್ವಹಣೆಗಾಗಿ ತಮ್ಮ ಗದ್ದೆಯಲ್ಲಿ ದುಡಿಯುತ್ತಾ ಕೂಲಿಗೆ ಹೋಗುತ್ತಿದ್ದರು. 25 ರೂ. ಕೂಲಿ ದೊರೆಯುತ್ತಿದ್ದ ಕಾಲ ಅದು. ಹೆಚ್ಚಾಗಿ ಗದ್ದೆ ಕೆಲಸಗಳಿಗೆ ಹೋಗುತ್ತಿದ್ದುದು ರೂಢಿ. ಇದು ವರ್ಷದಲ್ಲಿ ಕೆಲವೇ ತಿಂಗಳು ಕೂಲಿ ದೊರೆಯುತ್ತಿತ್ತು. ಒಂದು ಸಣ್ಣ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಮಳೆ ಬಂದರೆ ನೀರೆಲ್ಲಾ ಒಳಗೆ ಬರುತ್ತಿತ್ತು. ಸಾಲು–ಸಾಲು ಬಾಣಂತನಗಳು. ಮಳೆಗಾಲದಲ್ಲಿ ಮಕ್ಕಳನ್ನು ತವರುಮನೆಗೆ ಕಳಿಸಬೇಕಾದ ಪರಿಸ್ಥಿತಿ. ಶೋಭಾ ಅವರ ವಾರಿಗೆಯವರು ಆಡಿಕೊಳ್ಳುತ್ತಿದ್ದರು ಹಾಗೂ ಇವರ ಪರಿಸ್ಥಿತಿಯನ್ನು ಸುಧಾರಿಸಲು ಯಾವುದೇ ರೀತಿಯಲ್ಲಿ ನೆರವಾಗಲಿಲ್ಲ. ಇವರಿಗೂ ಸಹ ಇತರರ ಬಳಿ ಕೈಚಾಚುವುದು ಇಷ್ಟವಿರಲಿಲ್ಲ.

ಸ್ವಂತ ಗದ್ದೆಯ ಚೂರು–ಪಾರು ಆದಾಯ, ಗಂಡನ ಲಾರಿ ಕೆಲಸದ ದುಡಿಮೆ ಹಾಗೂ ಕೂಲಿಯ ಆಧಾರದಲ್ಲಿ ಜೀವನ ಸಾಗಿಸುತ್ತಿದ್ದರು. 2008ರಿಂದ ಅಡಿಕೆ ತೋಟಗಳಿಗೆ ವಕಾರಿ–ಅಂದರೆ ಕೂಲಿ ಕೆಲಸಕ್ಕೆ ಹೋಗಲು ಶುರು ಮಾಡಿದರು. ಈಗ ಇಡೀ ವರ್ಷ ಕೂಲಿ ದೊರೆಯುತ್ತಿತ್ತು. ಕೂಲಿಯೂ ಸಹ ರೂ. 150ಕ್ಕೆ ಏರಿಕೆಯಾಗಿತ್ತು. ಕೂಲಿ ಜೊತೆಗೆ ಸಗಣಿಯ ಬೆರಣಿ (ಕುಳ್ಳು) ತಯಾರಿಸಿ ಮಾರಾಟ ಮಾಡುವುದನ್ನು ಆರಂಭಿಸಿದರು. ಇದು ಇವರ ಬದುಕಿನಲ್ಲಿ ಒಂದು ಮಹತ್ತರ ತಿರುವು. ಶಿರಸಿಯ ಟಿ.ಎಸ್.ಎಸ್ ಸಂಸ್ಥೆಗೆ 2.50 ರೂ.ಗೆ ಒಂದು ಬೆರಣಿಯಂತೆ ಮಾರಾಟ. ಇದು ಶೂನ್ಯ ಬಂಡವಾಳದ ಉದ್ದಿಮೆಯಾಗಿತ್ತು. ಮನೆಯಲ್ಲಿ ಹಾಗೂ ಊರಿನಲ್ಲಿ ಸಿಗುವ ಸಗಣಿಯನ್ನು ಆರಿಸಿ ತರುತ್ತಿದ್ದುದರಿಂದ ಕಚ್ಚಾ ವಸ್ತುವಿಗೆ ಯಾವುದೇ ವೆಚ್ಚವಿಲ್ಲ. ಇನ್ನು, ಮನೆಯವರೇ ಸೇರಿ ಬೆರಣಿ ತಟ್ಟುತ್ತಿದ್ದರು. ಅಡಿಕೆ ತೋಟದ ಕೂಲಿ ಮೊತ್ತವನ್ನು ಮನೆವಾರ್ತೆಗೆ ವ್ಯಯಿಸುತ್ತಾ ಕುಳ್ಳು ಮಾರಾಟದ ಹಣವನ್ನು ಒಂದು ಕಡೆ ಕೂಡಿಡುತ್ತಾ ಬಂದರು ಶೋಭಾ. ಹೀಗೆ ಅಡಿಕೆ ತೋಟದ ಕೆಲಸದ ಜೊತೆಗೇ ಕುಳ್ಳು ಮಾಡಿ ಮಾರಾಟ ಮಾಡುತ್ತಾ ಇವರು ಉಳಿತಾಯ ಮಾಡಿದ ಹಣ ಎಷ್ಟು ಗೊತ್ತೇ? ರೂ.25000.

ಅದು 2013ನೇ ಇಸವಿ. 1999ರಿಂದ 14 ವರ್ಷ ಸತತವಾಗಿ ಕೂಲಿ ಮಾಡುತ್ತಲೇ ಜೀವನ ಸಾಗಿಸಿದ್ದರು. ಬಹುತೇಕ ಒಂದೂ ಕಾಲು ದಶಕ. ಕೃಷಿಯೂ ಕೈಹತ್ತುತ್ತಿರಲಿಲ್ಲ. ಗಂಡನ ಆರೋಗ್ಯವೂ ಅಷ್ಟಕ್ಕಷ್ಟೇ. ಬೇರೆಯವರಾಗಿದ್ದರೆ ಇತರೆ ಹೆಣ್ಣುಮಕ್ಕಳಂತೆ ಪಾಲಿಗೆ ಬಂದಿದ್ದೇ ಸಾಕು ಅಂದುಕೊಂಡು ಸುಮ್ಮನಾಗುತ್ತಿದ್ದರು. ಆದರೆ ಶೋಭಾ ಅವರ ಹೃದಯದಲ್ಲಿ ಒಬ್ಬ ಉದ್ಯಮಶೀಲ ಮಹಿಳೆ ಜಾಗೃತಳಾಗಿದ್ದಳು. ಕೂಲಿ ಮಾಡುತ್ತಾ ಕುಳ್ಳು ತಯಾರಿಸುತ್ತಿದ್ದುದೇ ಅದಕ್ಕೆ ಸಾಕ್ಷಿ. ಜೊತೆಗೆ ಮನೆ ತುಂಬಾ ಮಕ್ಕಳು. ಭವಿಷ್ಯದಲ್ಲಿ ಅವರ ಓದು, ಮದುವೆಯ ವೆಚ್ಚಗಳು ಕಣ್ಣ ಮುಂದೆ ಬೃಹದಾಕಾರವಾಗಿ ನಿಂತಿದ್ದವು. "ಈಗಿರುವ ದುಡಿಮೆಯಲ್ಲಿ ಮಕ್ಕಳಿಗೊಂದು ದಾರಿ ತೋರಿಸುವುದು ಸಾಧ್ಯವೇ ಇಲ್ಲ" ಅನ್ನಿಸಿ ಬೇರೆ ಏನಾದರೂ ಉದ್ದಿಮೆಗೆ ಕೈಹಾಕಬೇಕು ಅನ್ನಿಸುತ್ತಿತ್ತು.



ಆ ಸಮಯಕ್ಕೆ ಮಕ್ಕಳಿಂದಾಗಿ ಮೊಬೈಲೂ ಇವರ ಸಂಗಾತಿಯಾಗಿತ್ತು. ಯೂಟ್ಯೂಬಿನಲ್ಲಿ ಕಣ್ಣು ಹಾಯಿಸುವಾಗ ರೊಟ್ಟಿ ತಯಾರಿಕೆ ಬಗ್ಗೆ ನೋಡಿದ್ದರು. ಅದು ಶೋಭಾ ಅವರ ಮನಸ್ಸಿನಲ್ಲಿ ನಿಂತು ಬಿಟ್ಟಿತು. ರೊಟ್ಟಿ ತಯಾರಿಕೆ ಇವರಿಗೆ ಹೊಸದೇನೂ ಅಲ್ಲ. ಹಾನಗಲ್‌ನ ತವರು ಮನೆಯಲ್ಲಿ ಪ್ರತಿದಿನವೂ ರೊಟ್ಟಿ ಮಾಡುತ್ತಲೇ ಇದ್ದರು. ಆ ಅನುಭವ ಬೆನ್ನ ಹಿಂದಿತ್ತು. ಅಲ್ಲದೆ ಹಾನಗಲ್ಲಿನಲ್ಲಿಯೇ ಒಬ್ಬರು ರೊಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದುದು ಇವರ ಗಮನಕ್ಕೆ ಬಂದಿತ್ತು. ಈ ಎಲ್ಲಾ ಹಿನ್ನೆಲೆ ಇದ್ದುದರಿಂದ ಹಾಗೂ ಕೈಯಲ್ಲಿ 25 ಸಾವಿರ ಹಣವೂ ಇದ್ದುದರಿಂದ ಹೆಚ್ಚು ಆಲೋಚಿಸದೆ 2013ರಲ್ಲಿ ಹಾವೇರಿಯಿಂದ ಒಂದು ರೊಟ್ಟಿ ತಯಾರಿಕೆ

ಯಂತ್ರವನ್ನು ಖರೀದಿಸಿಯೇ ಬಿಟ್ಟರು. ಮನೆಯಲ್ಲಿ ಅದನ್ನು ಇಡಲು ಸೂಕ್ತ ಸ್ಥಳವೂ ಇರಲಿಲ್ಲ. ಅಡುಗೆ ಮನೆಯಲ್ಲೇ ಒಂದು ಕಡೆ ಇಟ್ಟರು. ಹೋಳಿ ಹಬ್ಬದಂದು ಅಧಿಕೃತವಾಗಿ ರೊಟ್ಟಿ ತಯಾರಿಕೆ ಆರಂಭವಾಗಿಯೇಬಿಟ್ಟಿತು.

ಅಂದಿನಿಂದ ಈವರೆಗೆ–ಅಂದರೆ ಕಳೆದ 10 ವರ್ಷಗಳಲ್ಲಿ ರೊಟ್ಟಿ ತಯಾರಿಕೆ ಇವರ ಕೈಹಿಡಿದಿದೆ. ಬದುಕನ್ನು ಮುನ್ನಡೆಸುತ್ತಿದೆ.

ರೊಟ್ಟಿ ತಯಾರಿಸುವುದು, ಹಿಟ್ಟಿನ ಮಿಶ್ರಣ, ಅದರ ಹದ, ಕಡಕ್ ಆಗಲು ಒಣಗಿಸುವುದು ಎಲ್ಲವೂ ಶೋಭಾ ಅವರಿಗೆ ತಿಳಿದಿತ್ತು. ಒಂದೆರಡು ಸಲ ಪ್ರಯತ್ನದ ನಂತರ ಯಂತ್ರದಲ್ಲಿ ರೊಟ್ಟಿ ಮಾಡುವುದು ಸಲೀಸಾಯಿತು. ಆದರೆ ಸಮಸ್ಯೆ ಬಂದಿದ್ದು ಮಾರುಕಟ್ಟೆ ಹುಡುಕುವುದರಲ್ಲಿ. ಅದರಲ್ಲಿ ಇವರಿಗೆ ಯಾವುದೇ ಅನುಭವವಿರಲಿಲ್ಲ. ಮಾರ್ಗದರ್ಶನ ಮಾಡುವವರೂ ಇರಲಿಲ್ಲ. ಆದರೂ ಭಂಡ ಧೈರ್ಯದಿಂದ ರೊಟ್ಟಿ ತಯಾರಿಸಿ ಶಿರಸಿಯಲ್ಲಿ ತಾವೇ ತಲೆ ಮೇಲೆ ಹೊತ್ತು ಮಾರಾಟ ಶುರು ಮಾಡಿದರು. ಹೋಟೆಲು, ಬೇಕರಿಗಳಿಗೆ ಅಲೆದರು. ಒಮ್ಮೆಯಂತೂ ಒಂದು ಹೋಟೆಲ್‌ನವರು ರೊಟ್ಟಿಯನ್ನು ವಾಪಸ್ ಕಳಿಸಿಬಿಟ್ಟಿದ್ದರು.

ಈ ಎಲ್ಲಾ ಆರಂಭಿಕ ಹಿನ್ನಡೆಗಳನ್ನು ಮೀರಿ ಮಾರುಕಟ್ಟೆ ಕುದುರಿಸಿಕೊಂಡರು ಶೋಭಾ. ಗುಣಮಟ್ಟ ಕಾಪಾಡುವುದು, ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುವುದು ಇವರ ಕೈಹಿಡಿಯಿತು. ಕೆಲವೊಮ್ಮೆ ಶಿರಸಿಗೆ ವಿದ್ಯಾಭ್ಯಾಸಕ್ಕೆ ಹೋಗುತ್ತಿದ್ದ ಮಕ್ಕಳು ಯಾವುದೇ ಹಿಂಜರಿಕೆ ಇಲ್ಲದೆ ಹೋಟೆಲಿನವರಿಗೆ, ಪಿಜಿಗಳಿಗೆ ಹಾಗೂ ಬೇಡಿಕೆ ಇಟ್ಟವರಿಗೆ ರೊಟ್ಟಿ ತಲುಪಿಸುತ್ತಿದ್ದರು.

2013ನೇ ವರ್ಷ ಇವರ ಪಾಲಿಗೆ ಹಲವು ರೀತಿಯಲ್ಲಿ ವಿಶೇಷ. ರೊಟ್ಟಿ ಯಂತ್ರ ತರುವ ನಿರ್ಧಾರದ ಜೊತೆಗೆ ಮನುವಿಕಾಸ ಸಂಸ್ಥೆಯ ಪರಿಚಯವೂ ಆಯಿತು. ಅದು ಮಾರುಕಟ್ಟೆ ವಿಸ್ತರಣೆಯ ದೃಷ್ಟಿಯಿಂದ ಇವರಿಗೆ ಮಹತ್ತರವಾದ ಮತ್ತೊಂದು ತಿರುವು. ಕರ್ಜಗಿ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ ಅವರ ಪರಿಚಯವಾಗಿ ರೊಟ್ಟಿ ಮಾರಾಟಕ್ಕೆ ಸಹಕರಿಸಲು ಮನವಿ ಮಾಡಿದರು. ಜೊತೆಗೆ ಸಂಸ್ಥೆಯು ರಚಿಸಿದ ಚೌಡೇಶ್ವರಿ ಸ್ವಸಹಾಯ ಸಂಘದ ಸದಸ್ಯರಾದರು. ಮನುವಿಕಾಸ ತನ್ನ ಎಲ್ಲಾ ಕಾರ್ಯಕ್ರಮಗಳಿಗೂ ಇವರಿಂದಲೇ ರೊಟ್ಟಿ ಖರೀದಿಸಲು ಆರಂಭಿಸಿತು. ಸಂಸ್ಥೆಯ ಸಿಬ್ಬಂದಿಗಳೂ ಅಗತ್ಯವಾದಾಗ ಇವರಿಗೇ ಆರ್ಡರ್ ಮಾಡುತ್ತಿದ್ದರು.

2017–18ನೇ ಇಸವಿ ಇವರ ರೊಟ್ಟಿ ಉದ್ಯಮಕ್ಕೆ ಮತ್ತೊಂದು ತಿರುವು ತಂದಿತು. ಅದೇನೆಂದರೆ;

ಹಾವೇರಿಯಿಂದ ಖರೀದಿಸಿದ ರೊಟ್ಟಿ ಯಂತ್ರವು ಕಾಲಲ್ಲಿ ತುಳಿದು ಚಾಲನೆ ಮಾಡುವಂತಹುದು. ಹೆಚ್ಚು ಶ್ರಮ ಬೇಡುತ್ತಿತ್ತು. ಶೋಭಾ ಅವರ ಮಕ್ಕಳು ಈ ಯಂತ್ರ ಚಾಲನೆ ಮಾಡಿ ರೊಟ್ಟಿ ತಯಾರಿಸಲು ಆಯಾಸ ಪಡುತ್ತಿದ್ದರು. ಇದರಿಂದ ಹೊರಬರಲು ಸಂಪೂರ್ಣ ಆಟೋಮ್ಯಾಟಿಕ್ ರೊಟ್ಟಿ ಯಂತ್ರ ಖರೀದಿಸುವ ಬಗ್ಗೆ ಆಲೋಚನೆ ಬಂದಿತ್ತು. ಆದರೆ ಆ ಯಂತ್ರದ ಮೌಲ್ಯ 4 ಲಕ್ಷ ರೂ.ಗಳು. ಅಷ್ಟು ಉಳಿತಾಯ ಇವರಲ್ಲಿ ಇರಲಿಲ್ಲ. ಸಾಲದ ಮೊರೆ ಹೋಗಬೇಕಿತ್ತು. ಈ ಸಾಲವನ್ನು ಪಡೆಯುವ ಸಲುವಾಗಿ ಕುಮಟಾದ ರುಡ್ ಸೆಟಿಯಲ್ಲಿ 15 ದಿನಗಳ ಸ್ವ–ಉದ್ಯೋಗ ತರಬೇತಿ ಪಡೆದರು. ಅಲ್ಲಿನ ಪ್ರಮಾಣಪತ್ರದ ಆಧಾರದಲ್ಲಿ ಶಿರಸಿಯ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಿಂದ 4 ಲಕ್ಷ ರೂ. ಸಾಲ ಮಂಜೂರಾಯಿತು. ಅದರಲ್ಲಿ ಸಂಪೂರ್ಣ ಸ್ವಯಂಚಾಲಿತ ಯಂತ್ರವೊಂದನ್ನು ಖರೀದಿಸಿದರು.

ಕಳೆದ ಐದು ವರ್ಷಗಳಿಂದ ಹಳೆಯ ಯಂತ್ರ ಮತ್ತು ಹೊಸದಾಗಿ ಖರೀದಿಸಿದ ಎರಡೂ ಯಂತ್ರಗಳಿಂದ ರೊಟ್ಟಿ ತಯಾರಿಕೆ ನಡೆಯುತ್ತಿದೆ. ಕಾಲಲ್ಲಿ ತುಳಿಯುವ ಯಂತ್ರದ ಸಾಮರ್ಥ್ಯ ದಿನ ಒಂದಕ್ಕೆ 500 ಇದ್ದರೆ ದೊಡ್ಡ ಯಂತ್ರದಲ್ಲಿ ದಿನ ಒಂದಕ್ಕೆ 2000 ರೊಟ್ಟಿ ತಯಾರಿಸಬಹುದು. ಸಾಮಾನ್ಯವಾಗಿ ಇವರು ಬೇಡಿಕೆಗೆ ಅನುಗುಣವಾಗಿ ರೊಟ್ಟಿ ತಯಾರಿಸಿ ಪೂರೈಸುತ್ತಾರೆ.

ರೊಟ್ಟಿ ಒಂದಕ್ಕೆ ಆರಂಭದಲ್ಲಿ ಮೂರು ರುಪಾಯಿ ಬೆಲೆ ಇಟ್ಟಿದ್ದರು. ಈಗ ಅದು 3.50 ರೂ.ಗೆ ಏರಿಕೆಯಾಗಿದೆ. ಇದು ಖಾಯಂ ಆಗಿ ಖರೀದಿಸುವವರಿಗೆ. ಇತರರಿಗೆ ಒಂದು ರೊಟ್ಟಿಗೆ 5 ರೂ. ಬೆಲೆ ಇದೆ. ರೊಟ್ಟಿ ತಯಾರಿಸುವಾಗ ಜೋಳದ ಹಿಟ್ಟಿನ ಜೊತೆಗೆ

ಸ್ವಲ್ಪ ಪ್ರಮಾಣದಲ್ಲಿ ಅಕ್ಕಿ ಹಿಟ್ಟು ಮಿಶ್ರ ಮಾಡುತ್ತಾರೆ. ಇದರಿಂದ ಬನಿ ಬರುತ್ತದೆ. ಅಂದರೆ 85 ಕಿಲೋ ಜೋಳಕ್ಕೆ 15 ಕಿಲೋ ಅಕ್ಕಿ ಬೆರೆಸಿ ಹಿಟ್ಟು ಮಾಡಿಸುತ್ತಾರೆ. ಇಷ್ಟು ಪ್ರಮಾಣದ ಹಿಟ್ಟಿಗೆ (85 ಕಿಲೋ ಜೋಳ ಮತ್ತು 15 ಕಿಲೋ ಅಕ್ಕಿ) ಅಂದಾಜು 3000 ರೊಟ್ಟಿಗಳನ್ನು ಮಾಡಬಹುದು ಎಂಬುದು ಇವರ ಅನುಭವ. ರೊಟ್ಟಿ ಒಂದಕ್ಕೆ 3.5 ರೂ.ಗಳಂತೆ 3000 ರೊಟ್ಟಿಗಳಿಗೆ 10500 ರೂ. ಆದಾಯ ಬರುತ್ತದೆ. ಇದರಲ್ಲಿ ಜೋಳ ಮತ್ತು ಅಕ್ಕಿಯ ಬಾಬ್ತು (ರೂ. 2500), ಹಿಟ್ಟು ಮಾಡುವುದು, ವಿದ್ಯುತ್ ವೆಚ್ಚ, ಇವರ ಕೂಲಿ, ಪ್ಯಾಕಿಂಗ್ ಹಾಗೂ ರವಾನೆ ವೆಚ್ಚ ತೆಗೆದರೆ ಸುಮಾರು 4000 ರೂ. ಇವರಿಗೆ ನಿವ್ವಳ ಆದಾಯ ದೊರೆಯುತ್ತದೆ. ಈ ಮೊತ್ತದಲ್ಲಿ ತುಸು ಏರು–ಪೇರುಗಳು ಆಗಬಹುದು ಎನ್ನುತ್ತಾರೆ ಇವರು. ಜೋಳವನ್ನು ತಮ್ಮ ತವರು ಮನೆಯಿಂದ ಖರೀದಿಸುತ್ತಾರೆ. ಕಟಾವು ಹಂಗಾಮಿನಲ್ಲಿ ಹೆಚ್ಚು ಖರೀದಿಸಿ ಇಟ್ಟುಕೊಳ್ಳುವುದರಿಂದ ಕಡಿಮೆ ಬೆಲೆಗೆ ದೊರೆಯುತ್ತದೆ. ಆಗ ಲಾಭದ ಪ್ರಮಾಣ ಹೆಚ್ಚು ಎನ್ನುತ್ತಾರೆ. ಉತ್ತಮ ಗುಣಮಟ್ಟದ ಜೋಳವನ್ನು ಖರೀದಿಸುವುದು ಇವರ ರೊಟ್ಟಿಗಳ ರುಚಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ ಎನ್ನುತ್ತಾರೆ ಮನುವಿಕಾಸ ಸಂಸ್ಥೆಯ ತಾಲ್ಲೂಕು ಸಂಯೋಜಕರಾದ ಶ್ರೀ ಮಣಿಕಂಠ.



ರೊಟ್ಟಿಗಳಿಗೆ ಬೇಡಿಕೆ ಹೆಚ್ಚಾದಂತೆಲ್ಲಾ ವಾರಕ್ಕೆ 2–3 ದಿನ ಹಿಟ್ಟು ಮಾಡಿಸಲು ಹೋಗಬೇಕಿತ್ತು. ವಿದ್ಯುತ್ ಇಲ್ಲವಾದರೆ ತಡವಾಗುವುದು ಸರ್ವೇಸಾಮಾನ್ಯ. 2019ರಲ್ಲಿ ಇವರಿಗೆ ಮನುವಿಕಾಸ ಮೂಲಕ ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್ ಸಂಪರ್ಕ ದೊರೆಯಿತು. ಅವರು ಹಿಟ್ಟಿನ ಗಿರಣಿ ಸ್ಥಾಪನೆಗೆ ಸಂಪೂರ್ಣ ಉಚಿತ ಸಹಾಯಧನ ಒದಗಿಸಿದರು. ಮನೆಯ ಮುಂಭಾಗದಲ್ಲಿ ಹಿಟ್ಟಿನ ಗಿರಣಿ ಸ್ಥಾಪಿಸಿದ್ದು, ಈಗ ರೊಟ್ಟಿ ತಯಾರಿಕೆಗೆ ಸ್ವತಃ ಹಿಟ್ಟು ಮಾಡಿಕೊಳ್ಳುವುದಲ್ಲದೆ ಗ್ರಾಮದ ಇತರರಿಗೂ ಹಿಟ್ಟು ಮಾಡಿಕೊಡುತ್ತಿದ್ದಾರೆ. ಅದರಿಂದಲೂ ಸ್ವಲ್ಪ ಆದಾಯ ಬರುತ್ತಿದೆ. ಹೀಗೆ ಇವರ ಸಮಸ್ಯೆಗಳಿಗೆ ಹಲವರಿಂದ ಪರಿಹಾರ ದೊರೆಯುತ್ತಿದೆ.

2022ರಲ್ಲಿ ರೊಟ್ಟಿ ತಯಾರಿಕೆಯಿಂದ ಉಳಿಸಿದ 70 ಸಾವಿರ ಹಣದಿಂದ ಎರಡು ಸಿಂಧಿ ಹಸುಗಳನ್ನು ಖರೀದಿಸಿದ್ದಾರೆ. ಇವುಗಳ ಕರಾವಿನಿಂದ ದಿನಕ್ಕೆ ಸರಾಸರಿ 16 ಲೀಟರ್ ಹಾಲು ಮಾರಾಟವಾಗುತ್ತಿದ್ದು, ತಿಂಗಳಿಗೆ 7–8 ಸಾವಿರ ರೂ. ಆದಾಯ ಪಡೆಯುತ್ತಿದ್ದಾರೆ. ಹಸುಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಆಲೋಚನೆ ಇದೆ ಎನ್ನುತ್ತಾರೆ. ರೊಟ್ಟಿ ತಯಾರಿಸುವ

ಮತ್ತು ಕಡಿಮೆ ಬೆಲೆಗೆ ನೀಡುವ ಹಲವರು ಇತ್ತೀಚೆಗೆ ಹೆಚ್ಚುತ್ತಿದ್ದಾರೆ. ಅದಕ್ಕಾಗಿಯೇ ಇವರ ಗಮನ ಹೈನುಗಾರಿಕೆಯಂತಹ ಉಪ ಉದ್ದಿಮೆಯತ್ತ ಹರಿದಿದೆ. ಆದರೆ ರೊಟ್ಟಿ ತಯಾರಿಕೆಯಿಂದ ವಿಮುಖರಾಗುವುದು ಇವರ ಉದ್ದೇಶವಲ್ಲ. ಗುಣಮಟ್ಟ ಕಾಯ್ದುಕೊಂಡರೆ ಎಂದಿಗೂ ಮಾರುಕಟ್ಟೆ ಇದ್ದೇ ಇರುತ್ತದೆ ಎಂಬುದು ಇವರ ನಂಬಿಕೆ.

ಇದರ ಜೊತೆಗೆ ರೊಟ್ಟಿ ಮಾರಾಟದ ಉಳಿತಾಯ ಹಣದಿಂದಲೇ 2 ಬೈಕ್ ಖರೀದಿಸಿದ್ದಾರೆ. ಒಂದು ಮಗನಿಗೆ, ಮತ್ತೊಂದು ಹೆಣ್ಣು ಮಕ್ಕಳಿಗೆ. ಮಕ್ಕಳು ಕಾಲೇಜಿಗೆ ಹೋಗಲು ಹಾಗೂ ಗ್ರಾಹಕರಿಗೆ ರೊಟ್ಟಿ ತಲುಪಿಸಲು ಇವು ಸಹಾಯಕ. ಜೊತೆಗೆ ಹೆಣ್ಣು ಮಕ್ಕಳಿಗೆ ಸ್ವಲ್ಪ ಚಿನ್ನ ಖರೀದಿಸಿದ್ದಾರೆ. ಗುಡಿಸಲಿನ ಜಾಗದಲ್ಲಿಯೇ ಕೆಲವು ವರ್ಷಗಳ ಹಿಂದೆ ಉತ್ತಮ ಮನೆ ನಿರ್ಮಿಸಿಕೊಂಡಿರುವುದು ವಿಶೇಷ. ಇದಕ್ಕೂ ಸಹ ತಮ್ಮ ಉಳಿತಾಯದ ಹಣವನ್ನೇ ವಿನಿಯೋಗಿಸಿದ್ದಾರೆ.

ಹೀಗೆ ಶೋಭಾ ಅವರ ಛಲದ ಬದುಕು ಸಾಗುತ್ತಿದೆ. ಇವರ ಉದ್ದಿಮೆ ಪುಟ್ಟದಿರಬಹುದು, ಆದರೆ ಅಲ್ಲಿ ಹಲವು ಪಾಠಗಳಿವೆ, ಕಲಿಕೆಗಳಿವೆ.

**ವಿಳಾಸ:**

ಎಸಳೆ, ಲಡಕನಹಳ್ಳಿ

ಶಿರಸಿ ತಾಲ್ಲೂಕು